ರೂ.ಗಳನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದರ ರಿಪೋರ್ಟ್ ಏನು ಎನ್ನುವುದನ್ನು ಹೇಳುತ್ತಿಲ್ಲ. ಅವರು ಆ ಬೆಳೆಯನ್ನು ಹೇಗೆ ಉಳಿಸುತ್ತಾರೆನ್ನುವ ಬಗ್ಗೆ ಚಿಂತನೆ ಇಲ್ಲ. 100 ಲಕ್ಷ ರೂ.ಗಳಲ್ಲಿ ಏನು ನೀವು ಉಳಿಸುತ್ತೀರಿ? ಅದಕ್ಕೆ ತಾವು ಉತ್ತರವನ್ನು ಹೇಳಬೇಕು. ರೀಸರ್ಚ್ ಮಾಡಿ ಬೆಳೆ ಉಳಿಸುವುದಕ್ಕೆ ನೀವು ಏನು ಮಾಡಿದ್ದೀರಿ? ಅದನ್ನು ಇವರು ಹೇಳುತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ದುಂಡಾಣು ರೋಗವನ್ನು ತಡೆ ಹಿಡಿಯಲಿಕ್ಕೆ 100 ಲಕ್ಷ ರೂ.ಗಳನ್ನು ಖರ್ಚು ಮಾಡಿ ಇದರ ಸಂಶೋಧನೆ ಮಾಡಲಾಗಿದೆ. ಆ ಸಂಶೋಧನೆಯಿಂದ ಬಂದಂಥ ವರದಿಯಿಂದ ಆ ಬೆಳೆ ಇಡುವುದಕ್ಕೆ ಇವತ್ತು ಸಾಧ್ಯವಿದೆ. ತಮಗೂ ಮಾಹಿತಿಯನ್ನು ಒದಗಿಸುತ್ತೇವೆ. ಏಕೆಂದರೆ, ಈಗಾಗಲೇ ನಾವು ರೈತರಿಗೆ ಈ ರೋಗವನ್ನು ಹೇಗೆ ತಡೆಹಿಡಿಯಬೇಕು ಎನ್ನುವುದರ ಬಗ್ಗೆ ಪಾಂಪ್ಲೆಟ್ ಮೂಲಕ ಹಂಚುತ್ತಿದ್ದೇವೆ. ಇದನ್ನು ಮಾನ್ಯ ಸದಸ್ಯರಿಗೂ ಒದಗಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಗೋಪಾಲ ಭಂಡಾರಿಯವರು ಪ್ರಶ್ನೆಯನ್ನು ಕೇಳಿ. ಮಾನ್ಯ ಕೃಷ್ಣಮೂರ್ತಿಯವರೆ, ನೀವು ಕೇಳಬೇಕೆಂದಿರುವುದು ಈ ಪ್ರಶ್ನೆಗೆ ಸಂಬಂಧವಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ನೀವು ಬೇರೆ ಪ್ರಶ್ನೆಯನ್ನು ಕೇಳಿ, ನಾವು ಸವಿಸ್ತಾರವಾಗಿ ಉತ್ತರವನ್ನು ಒದಗಿಸುತ್ತೇವೆ. ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ವಿಷಯ ಇದಕ್ಕೆ ಸಂಬಂಧವಿಲ್ಲ.

ಪಡಿತರ ಚೀಟಿಯಲ್ಲಿರುವ ದೋಷಗಳ ಬಗ್ಗೆ

22(332) ಶ್ರೀ ಗೋಪಾಲ ಭಂಡಾರಿ ಹೆಚ್(ಕಾರ್ಕಳ)

ಶ್ರೀ ಹೆಚ್.ಹಾಲಪ್ಪ (ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಪಡಿತರ ಚೀಟಿ ವಿತರಣೆಯಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಬಂದಿದೆ.

ಇದನ್ನು ಸರಿಪಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ:17.7.2007ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಅನರ್ಹರನ್ನು ಕೈಬಿಡುವ ಕ್ರಮ ಹಾಗೂ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಪಡಿತರ ಚೀಟಿ ನೀಡುವ ಕಾರ್ಯವನ್ನು ತಕ್ಷಣ ಪೂರೈಸಿ ಭಾವಚಿತ್ರ ಹಾಗೂ ಜೀವಮಾಪಕಗಳ ಸಂಗ್ರಹಣೆ ಕಾರ್ಯಕ್ರಮವನ್ನು ಪ್ರಾರಂಭಿಸಿ ಖಾಯಂ ಪಡಿತರ

ಚೀಟಿ ನೀಡುವ ಕೆಲಸಕ್ಕೆ ಚಾಲನೆ ನೀಡಬೇಕು ಎಂದು ಸೂಚನೆ ನೀಡಿರುತ್ತಾರೆ. ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸಿ, ತೆಗೆದುಕೊಂಡ ಕ್ರಮದ ಬಗ್ಗೆ ಕಾಲಕಾಲಕ್ಕೆ ಸರ್ಕಾರಕ್ಕೆ ವರದಿ ಮಾಡಬೇಕೆಮದು ಸೂಚಿಸಿರುತ್ತಾರೆ. ಈ ಕಾರ್ಯವು ಪ್ರಗತಿಯಲ್ಲಿರುತ್ತದೆ.

ನೆಮ್ಮದಿ ಕೇಂದ್ರಗಳ ಮುಖಾಂತರ ಪಡೆದುಕೊಂಡ ಪಡಿತರ ಚೀಟಿಗಳ ಅರ್ಜಿಗಳು ಸಮರ್ಪಕವಾಗಿ ಪರಿಶೀಲನೆಗಾಗಿ ಹಾಗೂ ವಿತರಣೆಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಇವರು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿ: 19.6.2009ರ ಅರೆ ಸರ್ಕಾರಿ ಪತ್ರದಲ್ಲಿ ಲೋಪದೋಷಗಳನ್ನು ಸರಿಪಡಿಸಲು ವಿವರವಾದ ಸೂಚನೆಗಳನ್ನು ನೀಡಿರುತ್ತಾರೆ.

ಅ) ಪಡಿತರ ಚೀಟಿಯಲ್ಲಿನ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಲು ತಾಲ್ಲೂಕಿನ ಅಧಿಕಾರಿಗಳಿಗೆ ಅಧಿಕಾರವಿದೆಯೇ;

ಅಧಿಕಾರವಿದೆ.

ಇ) ಹಾಗಿಲ್ಲದಿದ್ದಲ್ಲಿ ಕ್ರಮಬದ್ಧಗೊಳಿಸಲು ಅಥವಾ ಹೊಸ ಪಡಿತರ ಚೀಟಿ ಒದಗಿಸುವ ಅರ್ಜಿ ಸ್ವೀಕರಿಸುವ ಮತ್ತು ಮಂಜೂರು ಮಾಡುವ ಅಧಿಕಾರಿ ಯಾರಿಗಿದೆ;

ಅನ್ವಯಿಸುವುದಿಲ್ಲ.

ಈ) ಕಾರ್ಕಳ ತಾಲ್ಲೂಕಿನಲ್ಲಿ ಈವರೆಗೆ ಪಡಿತರ ಚೀಟಿಯಲ್ಲಿನ ದೋಷವನ್ನು ಸರಿಪಡಿಸಲು ಮತ್ತು ಬಿಪಿಎಲ್ ಪಡಿತರ ಚೀಟಿ ಕೋರಿ ಸ್ವೀಕರಿಸಲಾದ ಅರ್ಜಿಗಳನ್ನು; (ವಿವರ ಒದಗಿಸುವುದು)

ಕಾರ್ಕಳ ತಾಲ್ಲೂಕಿನಲ್ಲಿ ನೆಮ್ಮದಿ ಕೇಂದ್ರದ ಮೂಲಕ ಸ್ವೀಕರಿಸಲಾದ ಅರ್ಜಿಗಳ ವಿವರ

1) ಹೊಸ ಕಾಡುಗಳ ಬಗ್ಗೆ ಸ್ವೀಕರಿಸಿದ ಅರ್ಜಿಗಳು 2) ವರ್ಗ ಬದಲಾವಣೆ ಬಗ್ಗೆ ಸ್ವೀಕರಿಸಿದ ಅರ್ಜಿಗಳು	1896 720
ಒಟ್ಟು	2616
1) ಪರಿಶೀಲಿಸಿದ ಅರ್ಜಿಗಳು 2) ಪರಿಶೀಲಿಸಿದ ಅರ್ಜಿಗಳ ಪೈಕಿ ಬಿಪಿಎಲ್‌ಗೆ ಅರ್ಹ 3) ಎಪಿಎಲ್‌ಗೆ ಅರ್ಹ	2616 945 1024
ಒಟ್ಟು	1969
4) ತಿರಸ್ಕೃತ ಅರ್ಜಿಗಳು	647

ಪಡಿತರ ಚೀಟಿಯಲ್ಲಿನ ದೋಷಗಳ ತಿದ್ದುಪಡಿ ಬಗ್ಗೆ ಬಂದ ಅರ್ಜಿಗಳು (ದಿನಾಂಕ: 30.6.2009ರವರೆಗೆ) – 1192.

ಈ 1192 ಅರ್ಜಿಗಳ ಬಗ್ಗೆ ಕೊಮ್ಯಾಟ್ ಸಂಸ್ಥೆಯವರು ತಾಲ್ಲೂಕು ಕಛೇರಿಯಲ್ಲಿ ಗಣಕ ಯಂತ್ರವನ್ನು ಅಳವಡಿಸಿ ತಿದ್ದುಪಡಿ ಮಾಡಿರುತ್ತಾರೆ. ಆದರೆ ಅರ್ಜಿದಾರರಿಗೆ ಈವರೆಗೆ ತಿದ್ದುಪಡಿ ಆದ ಪಡಿತರ ಚೀಟಿಗಳನ್ನು ವಿತರಿಸಿರುವುದಿಲ್ಲ.

ಶ್ರೀ ಹೆಚ್ ಗೋಪಾಲಭಂಢಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಈ ಉತ್ತರದಿಂದ ನಮ್ಮ ಸಮಸ್ಯೆಗಳು ಪರಿಹಾರವಾಗಲಿಲ್ಲ. ಕಳೆದ ಒಂದು ವರ್ಷದಿಂದ ನಮ್ಮಲ್ಲಿ ಪಡಿತರ ಚೀಟಿಯ ಸಮಸ್ಯೆಯು ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷವಾಗಿ ಇಡೀ ರಾಜ್ಯದಲ್ಲಿದೆ ಎಂದು ಹೇಳಬಹುದು. ಆದರೆ ಎಲ್ಲಾ ಕಡೆಗಳಲ್ಲಿಯೂ ಕೂಡ ಒಂದು ಗೊಂದಲದ ವಾತಾವರಣವಿದೆ. ಎಪಿಎಲ್ ಯಾರಿಗೆ ಸಿಗಬೇಕಾಗಿದೆಯೋ ಅವರಿಗೆ ಬಿಪಿಲ್ ಸಿಕ್ಕಿದೆ, ಬಿಪಿಎಲ್ ಕಾರ್ಡ್ ಯಾರಿಗೆ ಸಿಗಬೇಕಾಗಿದೆಯೋ ಅವರಿಗೆ ಎಪಿಎಲ್ ಆಗಿದೆ. ಅದರಲ್ಲಿ ಯಾರ ಛಾಯಾಚಿತ್ರವಿರಬೇಕೋ ಅವರ ಛಾಯಾಚಿತ್ರವಿಲ್ಲ ಬೇರೆಯವರ ಛಾಯಚಿತ್ರವಿದೆ. ಹೆಸರು ಕೂಡ ಬೇರೆಬೇರೆಯಾಗಿದೆ. ನಮ್ಮ ಒದಗಿಸಿದಂತಹ ರೇಷನ್ ಕಾರ್ಡ್‌ಗಳಲ್ಲಿ ಬಡವರಿಗೆ ಸೀಮೆಎಣ್ಣೆ ಸಿಗದೆ ಇರುವಂತಹ ಪರಿಸ್ಥಿತಿಯಾಗಿದೆ. ಅದರಲ್ಲಿ ಅನಿಲ ಎಂದು ದಾಖಲಾಗಿದೆ. ಕಾರ್ಡ್‌ನ ಕೆಳಗಡೆ 'ಅನಿಲ' ಎಂದು ಇದೆ, ಸಿಲಿಂಡರ್ ಎಷ್ಟು ಇದೆ ಎಂದು ಕೇಳಿದರೆ ಸೊನ್ನೆ ಎಂದು ಇದೆ. ಸಿಲಿಂಡರ್ ಇಲ್ಲದೆ ಅನಿಲ ವಿತರಣೆಯಾಗುವಂತಹ ವ್ಯವಸ್ಥೆಯನ್ನು ಆಹಾರ ಇಲಾಖೆಯವರು ಎಲ್ಲಿಯಾದರೂ ಮಾಡಿದ್ದಾರಾ ಎನ್ನುವಂತಹ ಪ್ರಶ್ನೆ ಇವತ್ತು ಬರುತ್ತಿದೆ. ಇದರ ಜೊತೆಗೆ ನಾನು ಕೇಳಿದಂತಹ ಪ್ರಶ್ನೆ ಏನೆಂದರೆ, ಪಡಿತರ ಚೀಟಿಯಲ್ಲಿರುವ ದೋಷಗಳನ್ನು ಪರಿಹಾರ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ದಿನಾಂಕ: 17.07.2007ರಂದು ನಾವು ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆಂದು ಹೇಳಿದ್ದಾರೆ. ಇನ್ನೊಂದು 19.6.2009ರಂದು ನಾವು ಜಿಲ್ಲಾಧಿಕಾರಿಗಳಿಗೆ ಸರಿಪಡಿಸುವ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದೇಶದಲ್ಲಿ ಸೂಚನೆಯೂ ಹೋಗಿರಬಹುದು. ಆದರೆ ನಮ್ಮ ಜಿಲ್ಲೆಯಲ್ಲಿ ಪರಿಹಾರವಾಗಲಿಲ್ಲ. ಈಗಾಗಲೇ ನಾನು ಕೇಳಿದ ಹಾಗೆ ನಮ್ಮಲ್ಲಿ ದೋಷಗಳ ಪರಿಹಾರವಾಗದೆ ಗೊಂದಲದ ವಾತಾವರಣವಾಗಿದೆ. ನಾವೆಲ್ಲಾ ಶಾಸಕರು ದಿವಸಕ್ಕೆ ಕನಿಷ್ಟ 100 ಜನರ ಸಮಸ್ಯೆಗಳನ್ನು ಕೇಳಬೇಕಾಗುತ್ತದೆ. ಹೊಸ ಪಡಿತರ ಚೀಟಿಯನ್ನು ಕೊಡುವುದಕ್ಕೆ ಅಲ್ಲಿ ವ್ಯವಸ್ಥೆಯೇ ಇಲ್ಲ. ಇಲ್ಲಿ ನಾನು ಕೇಳಿರುವ (ಅ) ಪ್ರಶ್ನೆಗೆ ಅಧಿಕಾರವಿದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಕೇಳಿದರೆ ಅಧಿಕಾರವಿಲ್ಲ, ಅದಕ್ಕೆ ನೆಮ್ಮದಿ ಕೇಂದ್ರದವರು ಬರಬೇಕು, ಅರ್ಜಿಯನ್ನು ತೆಗೆದುಕೊಳ್ಳಬೇಕಾದರೆ ನಿರ್ದಿಷ್ಟ ಅವಧಿಯಲ್ಲಿ ತೆಗೆದುಕೊಳ್ಳಬೇಕು, ಅವರು ಹೇಳಿದಾಗ ಮಾತ್ರ ನಾವು ಅರ್ಜಿಯನ್ನು ಕೊಡುವುದು, ಇಲ್ಲದಿದ್ದರೆ ಅರ್ಜಿಯನ್ನು ತೆಗೆದುಕೊಳ್ಳವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ನಿರಾಕರಣೆ ಮಾಡುತ್ತಿದ್ದಾರೆ.

ಆದರ ದುರಸ್ತಿಯ ಕೆಲಸವು ನಿಂತುಹೋಗಿದೆ. ಸುಮಾರು 4 ತಿಂಗಳ ಹಿಂದೆ ಆ ದುರಸ್ತಿಗಾಗಿ ಅಫಿಡೆವಿಟ್‌ನ್ನು ಕೊಟ್ಟು ಅರ್ಜಿಯನ್ನು ಕೊಟ್ಟವರದೂ ಕೂಡ ಕಾರ್ಡನ್ನೂ ವಿತರಣೆ ಮಾಡಿರುವುದಿಲ್ಲ. ಮೊನ್ನೆ ನಮ್ಮಲ್ಲಿ ವಿತರಣೆಯನ್ನು ಮಾಡುತ್ತೇವೆಂದು ಹೇಳಿದರು. ಅದನ್ನು ತಕ್ಷಣ ನಿಲ್ಲಿಸಿಬಿಟ್ಟಿದ್ದಾರೆ. ಏಕೆ ಎಂದು ಕೇಳಿದರೆ ಈ ಬಗ್ಗೆ ಯಾರಿಗೂ ಕೂಡ ಗೊತ್ತಿರುವುದಿಲ್ಲ. ತಾಲ್ಲೂಕಿನ ಅಧಿಕಾರಿಗಳಿಗೆ ಅಧಿಕಾರವಿದೆ ಎಂದು ಹೇಳಿದ್ದಾರೆ. ಆದರೆ ಪಡಿತರ ಚೀಟಿ ಒದಗಿಸಲು ಮತ್ತು ಸ್ವೀಕರಿಸಲು, ಮಂಜೂರು ಮಾಡುವ ಅಧಿಕಾರ ಯಾರಿಗೆ ಇದೆ ಎಂದು ಕೇಳಿದರೆ ಅನ್ವಯಿಸುವುದಿಲ್ಲವೆಂದು ಉತ್ತರದಲ್ಲಿದೆ. ಬಹುಶಃ ಅನ್ವಯಿಸುವುದಿಲ್ಲವೆಂಬುದು ಯಾವ ಉತ್ತರವೆಂದು ನನಗೆ ಅರ್ಥವಾಗುವುದಿಲ್ಲ. ಅದನ್ನು ಯಾವುದೋ ನೆಮ್ಮದಿ ಕೇಂದ್ರಕ್ಕೆ ಕೊಟ್ಟಿದ್ದಾರೆ. ನೆಮ್ಮದಿ ಕೇಂದ್ರಗಳು ತಾಲ್ಲೂಕು ಕಛೇರಿಗಳಲ್ಲಿ ಇಲ್ಲ. ನನ್ನ ತಾಲ್ಲೂಕಿನಲ್ಲಿ ಎಲ್ಲೋ ಒಂದು ಪೆಟ್ರೋಲ್ ಬಂಕ್‌ನ ಬದಿಯಲ್ಲಿ ಒಂದು ಸಣ್ಣ ಪೆಟ್ಟಿಗೆ ಅಂಗಡಿಯ ತರಹದ ಗೂಡಿನಲ್ಲಿ ಅದನ್ನು ಕೊಡುತ್ತಿದ್ದಾರೆ. ಅಲ್ಲಿ ಜನರು ಹೋಗುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿಯೂ ಇದೆ. ಒಟ್ಟಾರೆಯಾಗಿ ಬಹಳಷ್ಟು ದೋಷಗಳು ಇಲ್ಲಿವೆ ನಮ್ಮಲ್ಲಿ ನಾನು ಕೇಳಿದ ಹಾಗೆ ಬಹುಶಃ ಫೋಟೋಗಳು ಸಹ ಬದಲಾವಣೆಯಾಗಿದೆ. ಇದನ್ನು ಯಾವಾಗ ದುರಸ್ತಿ ಮಾಡುತ್ತೀರಿ? ಈ ಗೊಂದಲವನ್ನು ಪರಿಹಾರ ಮಾಡುವುದಕ್ಕೆ ತಾಲ್ಲೂಕಿನ ತಹಶೀಲ್ದಾರ್‌ಗಳಿಗೆ ಸ್ಥಳೀಯವಾಗಿ ತಿದ್ದುಪಡಿ ಮಾಡುವುದಕ್ಕೆ ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ ಹೊಸ ಕಾರ್ಡ್‌ನ್ನು ಕೊಡುವುದಕ್ಕೆ ಹೆಸರನ್ನು ತೆಗೆಯಲಿಕ್ಕೆ ಅವರಿಗೆ ಅಧಿಕಾರವನ್ನು ಕೊಟ್ಟರೆ ಇದು ಪರಿಹಾರವಾಗುತ್ತದೆಂದು ನನ್ನ ನಂಬಿಕೆಯಾಗಿದೆ. ಇದನ್ನು ಯಾವಾಗ ಮಾಡುತ್ತೀರೆಂದು ನನ್ನ ಪ್ರಶ್ನೆಯಾಗಿದೆ.

ಶ್ರಿ ಹೆಚ್.ಹಾಲಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತಹ ಸಣ್ಣಪುಟ್ಟ ದೋಷಗಳು ಇರುವುದು ನಿಜ. ಅವರ ಕ್ಷೇತ್ರದಲ್ಲಿಯೂಇದೆ, ರಾಜ್ಯಾದ್ಯಂತವು ಕೆಲವು ದೋಷಗಳು ಇವೆ. ಅದನ್ನು ಸರಿಪಡಿಸುವ ಬಗ್ಗೆ ಕ್ರಮವನ್ನು ಕೈಗೊಂಡಿದ್ದೇವೆ ಅದನ್ನು ಸರಿಪಡಿಸುತ್ತೇವೆ. ಸಣ್ಣಪುಟ್ಟ ದೋಷಗಳು ಎಂದರೆ ಸರಿಯಾಗಿ ರೇಷನ್ ಬರದೇ ಇರುವುದು, ಇದು ತಹಶೀಲ್ದಾರ್‌ರವರ ಲೆವೆಲ್‌ನಲ್ಲಿ ಆಗುತ್ತಿದೆ. ಹೊಸ ಕಾರ್ಡುಗಳು ಕೊಡುವುದು, ಅರ್ಜಿಯನ್ನು ತೆಗೆದುಕೊಳ್ಳುವುದು, ಡಿ.ಸಿ.ಯವರಿಗೆ ಅಧಿಕಾರವಿದೆ ಎಂದು ಹೇಳಿದ್ದೇವೆ. ಅವರು ಕೇಳಿದಂತಹ ಮಾಹಿತಿಯನ್ನು ಅವರ ಕ್ಷೇತ್ರದ ಮಟ್ಟಿಗೆ ಒದಗಿಸಿದ್ದೇವೆ. ಆಗಿರುವಂತಹ ಲೋಪದೋಷಗಳನ್ನು ಮುಂದಿನ ದಿನಗಳಲ್ಲಿ ಸರಿಪಡಿಸುತ್ತೇವೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ರೇಷನ್ ವಿತರಣೆಯಲ್ಲಿ ಆಗಿರುವಂತಹ ಲೋಪಗಳನ್ನು ನಾನು ಕೇಲಿಲ್ಲ. ಕಾರ್ಡ್‌ನಲ್ಲಿ ಫೋಟೋಗಳು ಹೆಚ್ಚು ಕಡಿಮೆ ಇದೆ, ಪ್ರಾಯದ ಬಗ್ಗೆ ಹೆಚ್ಚು ಕಡಿಮೆ ಇದೆ, ಅಲ್ಲಿ ನಮೂದಿಸಿರುವಂತಹ ಸಂಬಂಧವೇ ಹೆಚ್ಚು ಕಡಿಮೆ ಇದೆ ಅದನ್ನು ದುರಸ್ತಿ ಮಾಡುವುದಕ್ಕೆ ಹೊಸ ಕಾರ್ಡ್‌ನ್ನು

ಕೊಡುವುದಕ್ಕೆ ತಹಶೀಲ್ದಾರ್‌ರವರಿಗೆ ಯಾಕೆ ಅಧಿಕಾರವನ್ನು ಕೊಟ್ಟಿಲ್ಲವೆಂದು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೇನೆಂದು ಹೇಳಿದರು. ಆದರೆ ಸ್ಥಳೀಯವಾಗಿ ಅದನ್ನು ದುರಸ್ತಿ ಮಾಡಿದರೆ ಈ ಸಮಸ್ಯೆಯೂ ಪರಿಹಾರವಾಗುತ್ತದೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಹೊಸ ಕಾರ್ಡಿನ ಬಗ್ಗೆ ಹೇಳುತ್ತಿಲ್ಲ. ಅಲ್ಲಿರುವಂತಹ ದೋಷಗಳನ್ನು ಸರಿಮಾಡುವ ಬಗ್ಗೆ ಅಧಿಕಾರವನ್ನು ತಹಶೀಲ್ದಾರವರಿಗೆ ಕೊಡಿ ಎಂದು ಕೇಳುತ್ತಿದ್ದಾರೆ. ಈ ಬಗ್ಗೆ ತಾವು ವಿಚಾರ ಮಾಡಿ.

ಶ್ರೀ ಹೆಚ್.ಹಾಲಪ್ಪ: ಮುಂದೆ ಪರಿಶೀಲಿಸುತ್ತೇವೆ. ಪ್ರತಿ ತಾಲ್ಲೂಕಿನಲ್ಲಿಯೂ ಒಂದು.....

ಶ್ರೀ ಸಿದ್ದರಾಮಯ್ಯ: ಮಾನ್ಯ ಮಂತ್ರಿಗಳು ಹೇಳುವಷ್ಟು ಅಲ್ಲಿ ಸುಲಭವಿಲ್ಲ.

ಅಧ್ಯಕ್ಷರು: ನಾನು ಏನು ಹೇಳುತ್ತೇನೆಂದರೆ, ಇದು ಬಹಳ ಗಂಭೀರವಾದಂತಹ ವಿಷಯವಾಗಿರುತ್ತದೆ. ಇದನ್ನು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ: ಅದಕ್ಕೆ ನಾನು ಸಲಹೆ ಮಾಡುವುದಕ್ಕೆ ನಿಂತಿದ್ದೇನೆ.

ಅಧ್ಯಕ್ಷರು: ಇದನ್ನು ಅರ್ಧಗಂಟೆ ಕಾಲ ಚರ್ಚೆಗೆ ತೆಗೆದುಕೊಂಡರೆ ಚರ್ಚೆಯಲ್ಲಿ ಬಹಳಷ್ಟು ಜನ ಶಾಸಕರು ಭಾಗವಹಿಸುತ್ತಾರೆ. ಇಲ್ಲಿ ಬಹಳ ಸಮಸ್ಯೆ ಇದೆ. ಇದನ್ನು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ definite ಆಗಿ ನಾನು allow ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ನಾನೂ ಕೂಡ ತಾವು ಕೊಟ್ಟಿರುವಂತಹ ಸಲಹೆಯನ್ನು ಅನುಮೋದಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಶಾಸಕರುಗಳು ಗೌರವವನ್ನು ಇಟ್ಟುಕೊಂಡು ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಬೇಳೂರು ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಬೇಳೂರು ಗೋಪಾಲಕೃಷ್ಣರವರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ ನಂತರ ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇದು ಒಂದೇ ತಾಲ್ಲೂಕಿಗೆ ಸೀಮಿತವಾಗಿರುವಂತಹ ಸಮಸ್ಯೆಯಲ್ಲ. ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ, ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿರುವಂತಹ ಸಮಸ್ಯೆ. ಈ ಸಮಸ್ಯೆಗೆ ನೂರಕ್ಕೆ ನೂರು ಪರಿಹಾರ ಸಿಗುತ್ತದೆಂದು ಎಂದು ನಾನು ಹೇಳುವುದಕ್ಕೆ ಹೋಗ್ತುವುದಿಲ್ಲ. ಆದರೆ

ಬಹಳಷ್ಟು ಸಮಸ್ಯೆಗಳು ಇವೆ, ಇವರು ದಿನಾಂಕ: 19.06.2009ರಲ್ಲಿ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಹೊರಡಿಸಿದ್ದಾರೆ. 14ನೇ ತಾರೀಖಿನೊಳಗಡೆ ನೆಮ್ಮದಿ ಕೇಂದ್ರದಲ್ಲಿರತಕ್ಕಂತಹ ಅರ್ಜಿಗಳನ್ನು ಅದರಲ್ಲಿ ಅನರ್ಹರು ಯಾರಿದ್ದಾರೆ, ಮತ್ತು ಲೋಪ ದೋಷಗಳು ಇರುವುದನ್ನು ಕಿತ್ತುಹಾಕಿ ಪಟ್ಟಿ ಮಾಡಿ ಎಂದು ಹೇಳಿದ್ದಾರೆ. ಜನರಲ್ ಆಗಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಅರ್ಹರನ್ನು ತೆಗೆದುಕೊಂಡು ಅದನ್ನು ಸೇರಿಸತಕ್ಕಂತಹ ಕೆಲಸವನ್ನು ಯಾರೂ ಮಾಡುವುದಿಲ್ಲ. ಅನರ್ಹರನ್ನು ಕಿತ್ತುಹಾಕಿದರೆ ಆ ಕೆಲಸವನ್ನು ಮಾಡುತ್ತಾರೆ ಏಕೆಂದರೆ, ಈಗ ಒಂದು ಕೋಟಿ ಚಿಲ್ಲರೆ ಬಿಪಿಎಲ್ ಆಗಿಬಿಟ್ಟಿದೆ. ಅದಕ್ಕೆ ಏನು ಮಾಡುತ್ತಾರೆಂದರೆ, ಎಲ್ಲವನ್ನು ಕಿತ್ತು ಹಾಕುತ್ತಾರೆ, ಚುನಾವಣೆ ಬಂದಾಗ ಒಂದೊಂದು ಜಿಲ್ಲೆಯಲ್ಲಿ ಏನು ಮಾಡಿದ್ದಾರೆಂದರೆ, ಎಲ್ಲಾ ನೆಮ್ಮದಿ ಕೇಂದ್ರಗಳಿಗೆ ಅರ್ಜಿಯನ್ನು ತೆಗೆದುಕೊಳ್ಳಿ ಅಫಿಡವಿಟ್‌ಗಳನ್ನು ಕೊಟ್ಟರು, 2 ತಿಂಗಳು ಆಹಾರವನ್ನು ಕೊಟ್ಟರು. ಈಗಲೂ ಕೊಡುತ್ತಿದ್ದೀರಿ, ಈಗ ನೀವು ಅದನ್ನು ತೆಗೆದುಹಾಕಿದರೆ ಅವರ ಗತಿ ಏನಾಗಬೇಕು? ನೀವು ಎಲ್ಲವನ್ನು ತೆಗೆದುಹಾಕುತ್ತೀರಿ. ಒಂದೊಂದು ಜಿಲ್ಲೆಯಲ್ಲಿ ಒಂದು-ಒಂದೂವರೆ ಲಕ್ಷ ಈ ತರಹ ಬಿಪಿಎಲ್ ಕಾರ್ಡ್‌ನ್ನು ಕೊಟ್ಟಿದ್ದಾರೆ. ಎಷ್ಟು ಬಿಪಿಎಲ್ ಕಾರ್ಡ್ ಎಂದು ಗುರುತಿಸಿದ್ದಾರೆ, ಅದಕ್ಕಿಂತ ಹೆಚ್ಚಾಗಿದೆ. ಬಿಪಿಎಲ್ ಕಾರ್ಡ್ ಎಂದು ಗುರುತಿಸಿರತಕ್ಕಂಥಹ ಕುಟುಂಬಗಳಿಗಿಂತ ಈಗ ಜಾಸ್ತಿಯಾಗಿದೆ. ಇದು ದೊಡ್ಡ ಸಮಸ್ಯೆಯಾಗಿದೆ. ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ತಾವು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಅವಕಾಶವನ್ನು ಮಾಡಿಕೊಡುತ್ತೇನೆ. ಮಾನ್ಯ ಪ್ರಕಾಶ್ ಬಾಬಣ್ಣ ಹುಕ್ಕೇರಿಯವರ ಪ್ರಶ್ನೆಯೂ ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ. ಶ್ರೀ ಬಸವರಾಜನ್‌ರವರ ಪ್ರಶ್ನೆ 24(39) ಇದಕ್ಕೆ 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ಮಾನ್ಯ ಬಸವರಾಜನ್‌ರವರೆ ತಮ್ಮ ಪ್ರಶ್ನೆಗೆ next week ಉತ್ತರವನ್ನು ಕೊಡಿಸುತ್ತೇನೆ.

ಜಮಖಂಡಿಯಲ್ಲಿರುವ ಬಂದಿಖಾನೆ ಸೌಕರ್ಯದ ಬಗ್ಗೆ

25(303) ಶ್ರೀ.ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್(ಜಮಖಂಡಿ)
ಶ್ರೀ ವಿ. ಉಮೇಶ್ ಕತ್ತಿ(ಮಾನ್ಯ ತೋಟಗಾರಿಕೆ ಹಾಗೂ ಬಂದಿಖಾನೆ ಸಚಿವರು)

ಅ) ಜಮಖಂಡಿ ಉಪ ಕಾರಾಗೃಹ ಹಳೆ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಸ್ಥಳಾಂತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಬಂದಿದ್ದಲ್ಲಿ ನಗರದಿಂದ 4 ಕಿ.ಮೀ ದೂರದಲ್ಲಿರುವ ಹೊಸ ಬಂದೀಖಾನೆಗೆ ಕೈದಿಗಳನ್ನು ಸಾಗಿಸಲು ವಾಹನದ ವ್ಯವಸ್ಥೆ ಮಾಡಲಾಗಿದೆಯೆ?